# ಕರ್ನಾಟಕ ಸರ್ಕಾರ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು

**ಸಂಖ್ಯೆ: ಎಲ್‌ಆರ್‌ಓ/130/2019-20** **ದಿನಾಂಕ: 14-08-2020**

**ಅಧಿಕೃತ ಜ್ಞಾಪನಾ ಪತ್ರ**

ವಿಷಯ: ಸಹಾಯಕ ಕೀಟಶಾಸ್ತ್ರಜ್ಞರ (Asst. Entomologist) ಹುದ್ದೆಯಿಂದ ವೃಂದ 'ಬಿ' ಸಮೂಹದ ಕೀಟಶಾಸ್ತ್ರಜ್ಞರ (Entomologist) ಹುದ್ದೆಗೆ ಸ್ಥಾನಪನ್ನ ಪದೋನ್ನತಿ ನೀಡಿ ಸ್ಥಳ ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ: 1. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಎಲ್‌ಆರ್‌ಓ/130/2019-20 ದಿ: 11.07.2020
2. ಇಲಾಖಾ ಪದೋನ್ನತಿ ಸಮಿತಿ ಸಭೆಯ ನಡಾವಳಿ ದಿ:12.08.2020
3. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಎಲ್‌ಆರ್‌ಓ/130/2019-20 ದಿ: 13.08.2020

******

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕೀಟಶಾಸ್ತ್ರಜ್ಞರ (Asst. Entomologist) ಜೇಷ್ಠತಾ ಆಧಾರದ ಮೇಲೆ ದಿನಾಂಕ: 14.08.2020ರಂದು ನಡೆಸಲಾದ ಸಮಾಲೋಚನೆಯಲ್ಲಿ ಪ್ರಸ್ತುತ ಇಲಾಖೆಯಲ್ಲಿ ಖಾಲಿ ಇರುವ ಕೀಟಶಾಸ್ತ್ರಜ್ಞರ (Entomologist) ಹುದ್ದೆಗೆ ಉಲ್ಲೇಖ(3)ರ ಸುತ್ತೋಲೆಯನ್ವಯ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ವೈದ್ಯರುಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಕಾಯ್ದೆ-2011 ಮತ್ತು ತಿದ್ದುಪಡಿ ಆದೇಶ 2013ರ ರೂಲ್-18(ಸಿ)&(ಡಿ) ನಿಯಮಗಳನ್ನು ಅನುಸರಿಸಿ, ದಿನಾಂಕ:14.08.2020 ರಂದು ನಡೆಸಲಾದ ಸಮಾಲೋಚನೆಗೆ ಹಾಜರಾಗಿ ಸ್ವ-ಇಚ್ಛೆ ಯಿಂದ ಸ್ಥಳ ಆಯ್ಕೆ ಮಾಡಿಕೊಂಡಂತೆ, ವೃಂದ 'ಬಿ' ವೇತನ ಶ್ರೇಣಿ ರೂ: 45300-1100-46400-1250-53900-1450-62600-1650-72500-1900-83900-2200-88300 ರಲ್ಲಿ **ಕೀಟಶಾಸ್ತ್ರಜ್ಞರ (Entomologist)** ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ ನಿಯಮ 42(ಬಿ) ರಡಿಯಲ್ಲಿ ಸ್ಥಾನಪನ್ನ ಪದೋನ್ನತಿ ನೀಡಿ ಈ ಕೆಳಗಿನ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿ ಆದೇಶಿದೆ.

| ಕ್ರಮ ಸಂಖ್ಯೆ | ಜೇಷ್ಠತೆ ಸಂಖ್ಯೆ | ಸಹಾಯಕ ಕೀಟಶಾಸ್ತ್ರಜ್ಞರ ಹೆಸರು ಮತ್ತು ಕಾರ್ಯನಿರ್ವಹಿಸುತ್ತಿರುವ ಸ್ಥಳ | ಮೀಸಲಾತಿ ಪ್ರವರ್ಗ | ದಿ:14.08.2020ರಂದು ಸಮಾಲೋಚನೆಯಲ್ಲಿ ಆಯ್ಕೆ ಮಾಡಿಕೊಂಡಂತೆ ನೇಮಿಸಿರುವ ಸ್ಥಳ |
|---|---|---|---|---|
| 1 | 2 | 3 | 4 | 5 |
| 1 | 2 | **ಶ್ರೀಮತಿ: ಭಾವನಾ. ಆರ್.**<br>**ಸಹಾಯಕ ಕೀಟಶಾಸ್ತ್ರಜ್ಞರು,**<br>**ಎನ್.ವಿ.ಬಿ.ಡಿ.ಸಿ.ಪಿ**<br>**ಆರೋಗ್ಯ ಮತ್ತು ಕು.ಕ.ಸೇ.ನಿರ್ದೇಶನಾಲಯ, ಬೆಂಗಳೂರು** | | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು |

ನಿಬಂಧನೆಗಳು:

1. ಪದೋನ್ನತಿ ಬಗ್ಗೆ ಯಾವುದೇ ಸಕ್ಷಮ ಪ್ರಾಧಿಕಾರದಿಂದ ಆಕ್ಷೇಪಣೆ ಬಂದಲ್ಲಿ ಅದನ್ನು ರದ್ದುಪಡಿಸುವ ಅಧಿಕಾರ ಈ ನಿರ್ದೇಶನಾಲಯಕ್ಕೆ ಇರುತ್ತದೆ.

2. ಈ ಅಧಿಕೃತ ಜ್ಞಾಪನಾ ಪತ್ರದಲ್ಲಿ ಪದೋನ್ನತಿ ನೀಡಿರುವ ಯಾವುದೇ ನೌಕರರ ಜೇಷ್ಠತೆಯಲ್ಲಿ ಕಿರಿಯವರಾಗಿರುವುದು ಕಂಡುಬಂದಲ್ಲಿ ಅಂತಹ ನೌಕರರ ಪದೋನ್ನತಿಯನ್ನು ಯಾವುದೇ ಮುನ್ಸೂಚನೆ ಅಥವಾ ಕಾರಣ ತಿಳಿಸದೇ ಹಿಂಪಡೆಯುವ/ರದ್ದುಪಡಿಸುವ ಷರತ್ತಿಗೆ ಒಳಪಟ್ಟಿರುತ್ತದೆ ಹಾಗೂ ಯಾವುದೇ ನೌಕರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವುದು ಕಂಡುಬಂದಲ್ಲಿ ಸಂಬಂದಿಸಿದ ನೌಕರರ ಪದೋನ್ನತಿಯನ್ನು ಹಿಂಪಡೆಯಲಾಗುವುದು.

3. ಈ ಪದೋನ್ನತಿ ಆದೇಶವು, ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂಖ್ಯೆ: 2453/2020 ಗೆ ನೀಡುವ ಅಂತಿಮ ತೀರ್ಪಿನ ಷರತ್ತಿಗೊಳಪಟ್ಟಿರುತ್ತದೆ.

4. ಪದೋನ್ನತಿ ಹೊಂದಿರುವ ನೌಕರರನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆ ಮಾಡಿ ನೇಮಕಾತಿ ಮಾಡಿರುವ ಸ್ಥಳದಲ್ಲಿ ಕರ್ತವ್ಯದ ಮೇಲೆ ಹಾಜರಾಗುವಂತೆ ಸಂಬಂಧಪಟ್ಟ ನೌಕರರುಗಳಿಗೆ ಸೂಚಿಸುವಂತೆ ಮೇಲಾಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಆದೇಶಿಸಿದೆ.

5. ಪದೋನ್ನತಿ ನೀಡಿ ನೇಮಕ ಮಾಡಿರುವ ನೌಕರರು ಈ ಆದೇಶ ಹೊರಡಿಸಿರುವ ದಿನಾಂಕದಿಂದ ಏಳು(07) ದಿನದೊಳಗಾಗಿ ನೇಮಕಾತಿ ಮಾಡಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಿ, ಹಾಜರಾತಿ ವರದಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸಿಕೊಡುವಂತೆ ಸೂಚಿಸಿದೆ. ತಪ್ಪಿದಲ್ಲಿ, ಅಂತಹ ನೌಕರರ ಪದೋನ್ನತಿ ಆದೇಶವನ್ನು ಯಾವುದೇ ಮುನ್ಸೂಚನೆ ನೀಡದೆ ಹಿಂಪಡೆಯಲಾಗುವುದು.

6. ಪದೋನ್ನತಿ ಹೊಂದಿ ನೇಮಕಗೊಂಡು ಸ್ಥಳ ನಿಯುಕ್ತಿ ಹೊಂದಿದ ನೌಕರರುಗಳ ಸ್ಥಳ ಮಾರ್ಪಾಡು ಕೋರಿ ಸಲ್ಲಿಸುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಯಾವುದೇ ಶಿಫಾರಸ್ಸು/ಒತ್ತಡಗಳನ್ನು ತರತಕ್ಕದ್ದಲ್ಲ.

14/8

"ಟಿಪ್ಪಣಿ ಆಯುಕ್ತರಿಂದ ಅನುಮೋದಿಸಿದೆ"

ಮುಖ್ಯ ಆಡಳಿತಾಧಿಕಾರಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:

1. ಮಹಾಲೇಖಪಾಲರು, ಕರ್ನಾಟಕ ವೃತ್ತ (ಎ&ಇ), ಬೆಂಗಳೂರು
2. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು, ವಿಧಾನಸೌಧ, ಬೆಂಗಳೂರು
3. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು
4. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು-ಸದರಿ ಮಾಹಿತಿಯನ್ನು ಮಾನ್ಯ ಆಯುಕ್ತರ ಮಾಹಿತಿಗೆ ತರಲು ತಿಳಿಸಿದೆ.
5. ಮಾನ್ಯ ನಿರ್ದೇಶಕರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು-ಸದರಿ ಮಾಹಿತಿಯನ್ನು ಮಾನ್ಯ ನಿರ್ದೇಶಕರ ಮಾಹಿತಿಗೆ ತರಲು ತಿಳಿಸಿದೆ.
6. ಎಲ್ಲಾ ವಿಭಾಗೀಯ ಸಹ ನಿರ್ದೇಶಕರು, ________________ ವಿಭಾಗ,
7. ಮುಖ್ಯ ಆಡಳಿತಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
8. ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
9. ಕಚೇರಿ ಅಧೀಕ್ಷಕರು ( ನಗದು / ಆಡಳಿತ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
10. ಸಂಬಂಧಿಸಿದ ನೌಕರರು – ಈ ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಂಡ ಪದೋನ್ನತಿ ನೀಡಿ ನೇಮಿಸಿರುವ ಸ್ಥಳದಲ್ಲಿ ವರದಿ ಮಾಡಿ ಮೇಲಾಧಿಕಾರಿಗಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸುವುದು.
11. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು-ಸದರಿ ಪದೋನ್ನತಿ ಆದೇಶವನ್ನು ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ತಿಳಿಸಿದೆ.
12. ಆದೇಶ ಪ್ರತಿ/ ಕಛೇರಿ ಪ್ರತಿ